**ಸಾಕ್ಷಿಯನ್ನು ದಿನಾಂಕಃ 10.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಜಿ ವಿ ಜಿ ವಕೀಲರಿಂದಃ**

ನಾನು ಸರಗೂಲು ತಾಲ್ಲೂಕಿನ ಚೆಕ್ಕೂರು ಗ್ರಾಮದ ವಾಸಿಯಾಗಿರುತ್ತೇನೆ. ನನ್ನ ತಂದೆಯ ಊರು ಸತ್ತಿಗೆಹುಂಡಿ ಗ್ರಾಮ ಆಗಿರುತ್ತದೆ. ನಾನು ಸದರಿ ಸತ್ತಿಗೆಹುಂಡಿ ಗ್ರಾಮದಿಂದ ಕೇರಳಕ್ಕೆ ಮದುವೆಯಾಗಿರುತ್ತೇನೆ. ನನ್ನ ಗಂಡ ವಿಜಯ್ ರವರು ತೀರಿಕೊಂಡು ಸುಮಾರು 42 ವರ್ಷ ಆಗಿರುತ್ತದೆ. ನಾನು ನನ್ನ ಗಂಡನಾದ ವಿಜಯ್ ರವರನ್ನು ಮದುವೆಯಾದ ನಂತರ ಕೇರಳದಲ್ಲಿ ಅವರ ಜೊತೆಯಲ್ಲಿದ್ದು ಅವರು ತೀರಿ ಹೋದ ನಂತರ ಕಳೆದ ಸುಮಾರು 25 ವರ್ಷಗಳಿಂದ ಚೆಕ್ಕೂರು ಗ್ರಾಮದಲ್ಲಿ ವಾಸ ಇರುತ್ತೇನೆ.

ನಾನು ಕೂಲಿ ಕೆಲಸ ಮಾಡಿಕೊಂಡಿರುತ್ತೇನೆ. ನಾನು ಸದರಿ ಕೂಲಿಯಿಂದ ತಿಂಗಳಿಗೆ 8 ರಿಂದ 9 ಸಾವಿರ ದುಡಿಮೆ ಮಾಡುತ್ತೇನೆ. ನನಗೆ ತಿಂಗಳಿಗೆ ಎಲ್ಲ ಸೇರಿ ಸುಮಾರು 10 ಸಾವಿರ ಖರ್ಚು ಬರುತ್ತದೆ. ನನಗೆ ಮೇಲೆ ಹೇಳಿದ ಕೂಲಿ ಬಿಟ್ಟು ಬೇರೆ ಯಾವುದೇ ಆದಾಯದ ಮೂಲ ಇರುವುದಿಲ್ಲ. ನಾನು ಕಳೆದ ಎರಡು ವರ್ಷಗಳಿಂದ ಕೂಲಿ ಕೆಲಸಕ್ಕೆ ಹೋಗುತ್ತಿದ್ದೇನೆ. ಸದರಿ ಎರಡು ವರ್ಷದ ಹಿಂದೆ ನನ್ನ ಗಂಡನ ಸಹೋದರರು ಕಳುಹಿಸಿಕೊಟ್ಟಿದ್ದ ಹಣದಿಂದ ಜೀವನ ನಡೆಸುತ್ತಿದ್ದೆ. ನನ್ನ ಗಂಡ ತೀರಿಕೊಂಡ ಸಮಯದಲ್ಲಿ ಅವರ ಸಹೋದರರರು ನನಗೆ 10 ಲಕ್ಷ ರೂಪಾಯಿ ಹಣ ನೀಡಿದ್ದರು. ನಾನು ಚೆಕ್ಕೂರು ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿರುತ್ತೇನೆ. ನಾನು ಕೇರಳದಿಂದ ಚೆಕ್ಕೂರಿಗೆ ಬಂದಾಗ ಚೆಕ್ಕೂರಿನ ಸುಬ್ರಮಣ್ಯ ರವರ ಮನೆಯಲ್ಲಿ ವಾಸವಿದ್ದೇ ಎಂದರೆ ಸರಿ.

ಆರೋಪಿ ನನಗೆ ಪರಿಚಿತರಾಗಿರುತ್ತಾರೆ. ಸದರಿ ಸುಬ್ರಮಣ್ಯ ರವರ ಮನೆಯಲ್ಲಿ ವಾಸ ಮಾಡಿದ ನಂತರ 6-7 ವರ್ಷಗಳ ಹಿಂದೆ ನಾನು ಆರೋಪಿಯ ಮನೆಯಲ್ಲಿ ವಾಸವಿದೆದೇ ಎಂದರೆ ಸಾಕ್ಷಿ ಸುಮಾರು 2 ವರ್ಷ ಆ ರೀತಿ ವಾಸವಿದ್ದೇ ಎಂದು ನುಡಿಯುತ್ತಾರೆ. ನಾನು ಆ ರೀತಿ ಆರೋಪಿಯ ಮನೆಯಲ್ಲಿ ವಾಸವಿದ್ದ ಮನೆ ಹಾಗೂ ಆರೋಪಿಯ ವಾಸವಿದ್ದ ಮನೆ ಎರಡು ಒಂದಕ್ಕೊಂದು ತಾಗಿಕೊಂಡಿರುತ್ತವೆ ಎಂದರೆ ಸರಿ. ನಾನು ಆರೋಪಿಯ ಮನೆಯಲ್ಲಿ ವಾಸವಿದ್ದ ಸಮಯದಲ್ಲಿ ಅವರ ಜೊತೆ ಅನ್ಯೋನ್ಯವಾಗಿದ್ದೇ ಎಂದರೆ ಸಾಕ್ಷಿಯು ನಾನು ಅವರ ಮನೆಯಲ್ಲಿ ವಾಸ ಮಾಡಲು ಆರಂಭಿಸಿದ ಸ್ವಲ್ಪ ದಿನಕ್ಕೆ ಅವರು ಜಗಳವಾಡಲು ಆರಂಭಿಸಿದ್ದು ನಾನು ಮನೆ ಖಾಲಿ ಮಾಡಿಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ವಾರ್ಷಿಕವಾಗಿ ಅಲ್ಪಸಲ್ಪ ಉಳಿತಾಯ ಮಾಡುತ್ತೇನೆ ಆದರೆ ಎಷ್ಟು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ನಾನು ನನ್ನ ಗಂಡನ ಸಹೋದರರು ಕಳೆದ 4 ವರ್ಷದ ಹಿಂದೆ ಜೀವನಾಂಶಕ್ಕಾಗಿ ನೀಡಿದ 10 ಲಕ್ಷ ಹಣದಿಂದ ಆರೋಪಿಗೆ ಸಾಲ ನೀಡಿರುತ್ತೇನೆ. ಸದರಿ ಹಣವನ್ನು ನನ್ನ ಗಂಡನ

ಸಹೋದರರು ನನಗೆ ನಗದು ರೂಪದಲ್ಲಿ ನೀಡಿರುತ್ತಾರೆ. ಸದರಿ ಹಣವನ್ನು ನಾನು ಮನೆಯಲ್ಲಿಯೇ ಇಟ್ಟುಕೊಂಡಿರುತ್ತೇನೆ. ನಾನು ಜನರಿಗೆ ಹಣ ಸಾಲ ಕೊಟ್ಟರೆ ರೂ.100/- ಗೆ ಮಾಸಿಕ ರೂ.1 ½ -2 ರಂತೆ ಬಡ್ಡಿಗೆ ಕೊಡುತ್ತೇನೆ. ನಾನು ಆರೋಪಿಗೆ ಸಾಲವನ್ನು ಕೊಟ್ಟಿರುವುದನ್ನು ಹೊರತುಪಡಿಸಿ ಬೇರೆ ಯಾರಿಗೂ ಸಾಲ ಕೊಟ್ಟಿರುವುದಿಲ್ಲ. ನಾನು ಬೇರೆಯವರಿಗೆ 5 ಸಾವಿರ 10 ಸಾವಿರದಷ್ಟು ಸಾಲ ನೀಡಿದ್ದು ಅವರಿಂದ ಯಾವುದೇ ಪತ್ರ ಅಥವಾ ಚೆಕ್ಕನ್ನು ಪಡೆದಿರುವುದಿಲ್ಲ. ಆರೋಪಿಗೆ ಸಾಲ ಕೊಟ್ಟ ಬಗ್ಗೆ ಚೆಕ್ಕ ಅನ್ನು ಪಡೆದಿರುತ್ತೇನೆ. ಬೇರೆಯವರು ಸಾಲ ಪಡೆದುಕೊಂಡವರು 6 ತಿಂಗಳು ಅಥವಾ ಒಂದು ವರ್ಷದ ಒಳಗೆ ಹಿಂತಿರುಗಿಸುತ್ತಿದ್ದರು. ನಾನು ಆ ರೀತಿ ಸಾಲವನ್ನು 2-3 ಜನಕ್ಕೆ ನೀಡಿರುತ್ತೇನೆ. ನಾನು ಆರೋಪಿಗೆ 5 ಲಕ್ಷ ನೀಡಿರುತ್ತೇನೆ. ನಾನು ಆರೋಪಿಗೆ ಸಾಲ ನೀಡುವ ಸಮಯದಲ್ಲಿ ನನ್ನ ಇಬ್ಬರು ಹೆಣ್ಣು ಮಕ್ಕಳು ಇದ್ದಿರುತ್ತಾರೆ. ನಾನು ಸಾಲ ಕೊಟ್ಟ ಸಮಯದಲ್ಲಿ ಆರೋಪಿ ನನಗೆ ಯಾವುದೇ ಚೆಕ್ ಅನ್ನು ನೀಡಿರರುವುದಿಲ್ಲ, ಸಾಲದ ಹಣವನ್ನು ಹಿಂತಿರುಗಿಸುವಂತೆ ಆರೋಪಿ ಕೇಳಿದಾಗ ಆತ ನನಗೆ ನಿಪಿ-1 ರ ಚೆಕ್ ಅನ್ನು ನೀಡಿರುತ್ತಾರೆ. ಆರೋಪಿ ಸಾಲ ಕೇಳಿದ ಸುಮಾರು 15-20 ದಿನಗಳ ನಂತರ ನಾನು ಆತನಿಗೆ ಸಾಲ ನೀಡಿರುತ್ತೇನೆ. ನಾನು ಆರೋಪಿಯ ಮನೆಯನ್ನು ಖಾಲಿಮಾಡುವಾಗ ನಮ್ಮ ನಡುವೆ ವೈಮನಸ್ಸು ಬಂದು ಖಾಲಿ ಮಾಡಿರುತ್ತೇನೆ ಎಂದರೆ ಸರಿ. ನಾನು ಹಾಗೂ ಆರೋಪಿ ಅಷ್ಟೊಂದು ವಿಶ್ವಾಸದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿಯು ಈ ಹಿಂದೆ ಚೆನ್ನಾಗಿ ವಿಶ್ವಾಸದಿಂದಲೇ ಇದ್ದರು ಎಂದು ನುಡಿಯುತ್ತಾರೆ. ಆರೋಪಿ ನನ್ನಲ್ಲಿ 100 ರೂಪಾಯಿ ತಿಂಗಳಿಗೆ 2 ರೂಪಾಯಿ ಬಡ್ಡಿ ಕೊಡುವುದಾಗಿ ತಿಳಿಸಿ 5 ಲಕ್ಷ ಸಾಲ ಪಡೆದಿರುತ್ತಾರೆ.

ಆರೋಪಿಯು ನಿಪಿ-1 ರ ಚೆಕ್ ಅನ್ನು ನನ್ನ ಮುಂದೆ ತುಂಬಿಸಿ ಸಹಿ ಮಾಡಿಕೊಟ್ಟಿರುತ್ತಾರೆ. ಆರೋಪಿಗೆ ಕಳುಹಿಸಿದ ನೋಟಿಸಿನ ಒಕ್ಕಣೆಗಳನ್ನ ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಸದರಿ ನೋಟಿಸ್ ನಲ್ಲಿ ಆರೋಪಿಗೆ ಬಡ್ಡಿಯ ಮೇಲೆ ಸಾಲ ಕೊಟ್ಟಿರುವುದಾಗಿ ತಿಳಿಸಿರುವುದಿಲ್ಲ ಎಂದರೆ ವಕೀಲರಿಗೆ ತಿಳಿಸಿದ್ದೇ ಎಂದು ನುಡಿಯುತ್ತಾರೆ. ನನ್ನ ಗಂಡನಿಗೆ ಕೇರಳದಲ್ಲಿ ಸ್ವಲ್ಪ ಜಮೀನು ಇದ್ದಿರುತ್ತದೆ. ಸಾಕ್ಷಿಯು ಮುಂದುವರೆದು ಸದರಿ ಜಮೀನಿನ ಬಾಬ್ತು ಅವರ ಸಹೋದರರು ನನಗೆ ಜೀವನಾಂಶಕ್ಕಾಗಿ 10 ಲಕ್ಷ ನೀಡಿರುತ್ತಾರೆಂದು ನುಡಿಯುತ್ತಾರೆ. ಆ ರೀತಿ 10 ಲಕ್ಷ ಹಣ ನೀಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನನ್ನ ಗಂಡ ಹಾಗೂ ಅವರ ಸಹೋದರರಿಗೆ ಕೇರಳದಲ್ಲಿ ಯಾವುದೇ ಜಮೀನು ಇರುವುದಿಲ್ಲ ಹಾಗೂ ನನ್ನ ಗಂಡನ ಸಹೋದರರರು ಜೀವನಾಂಶಕ್ಕಾಗಿ ನನಗೆ ಯಾವುದೇ 10 ಲಕ್ಷ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಹಾಗೂ ಅವರ ಸಹೋದರರ ಹೆಸರಿನಲ್ಲಿ ಜಮೀನು ಇದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಾನು ಆರೋಪಿಯ ಮನೆಯಲ್ಲಿ ವಾಸಮಾಡಿಕೊಂಡಿರುವಾಗ ನಾನು ಆರೋಪಿಯ ಮನೆಗೆಹೋಗುವುದು ಹಾಗೂ ಆರೋಪಿಯು ನಮ್ಮ ಮನೆಗೆ ಬರುವುದು ಮಾಡುವುದು ಇದ್ದಿತ್ತು ಎಂದರೆ ಸರಿ. ಆ ಸಮಯದಲ್ಲಿ ಆರೋಪಿಗೆ ಸೇರಿದ ಖಾಲಿ ಚೆಕ್ ಅನ್ನು ನಾನು ಎತ್ತಿಕೊಂಡು ನಂತರ ಅವರ ಮೇಲೆ ವೈಮನಸ್ಸು ಬಂದ

ನಂತರ ಸದರಿ ಚೆಕ್ ಅನ್ನು ದುರ್ಬಳಕ್ಕೆ ಮಾಡಿಕೊಂಡು ಅವರ ವಿರುದ್ಧ ಈ ಸುಳ್ಳು ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಯಾವುದೇ ಹಣ ಕೊಟ್ಟಿರುವುದಿಲ್ಲ ಹಾಗೂ ಆ ಬಗ್ಗೆ ಅವರು ನನಗೆ ಯಾವುದೆ ನಿಪಿ–1 ರ ಚೆಕ್ ಅನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನನ್ನು ಅವರ ಮನೆಯಿಂದ ಹೊರಗೆ ಹಾಕಿದ ನಂತರ ನಾನು ಅವರ ಮೇಲಿನ ವೈಮನಸ್ಸಿನಿಂದ ಹಿಂದೆ ಪಡೆದ ಚೆಕ್ಕನ್ನು ತುಂಬಿಸಿ ಸುಳ್ಳು ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ನೋಟಿಸ್ ಅನ್ನು ನೀಡಿದ ನಂತರ ಆರೋಪಿ ನನ್ನನ್ನು ಖುದ್ದಾಗಿ ಭೇಟಿಯಾಗಿ ಈ ಬಗ್ಗೆ ವಿಚಾರಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಆರೋಪಿ ನನ್ನನ್ನು ಭೇಟಿಯಾದಾಗ ನಾನು ಅವರಲ್ಲಿ ಬೇರೆಯವರ ಚಿತಾವಣೆಯ ಮೇರೆಗೆ ನೋಟಿಸ್ ಅನ್ನು ಕೊಟ್ಟಿದ್ದು ಯಾವುದೇ ಕೇಸು ಹಾಕುವುದಿಲ್ಲ ಎಂದು ಸಮಾಧಾನ ಮಾಡಿ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನಿಪಿ–1 ರಲ್ಲಿ ತಿಳಿಸಿರುವ ಹಣವನ್ನು ನೀಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**